


ಒಬ್ಬ ರಾಜಕಾರಣಿಗೆ ಒಂದು ನಾಯಿ ಕಚ್ಚಿತ್ತು. ಕೆಲವು ಪರೀಕ್ಷೆಯ ನಂತರ

ಡಾಕ್ಟರ್ ಹೇಳಿದರು, ನಿಮಗೆ ಕಚ್ಚಿದ್ದು ಹುಚ್ಚು ನಾಯಿಯೇ! ನಿಮಗೂ ಅದರ ರೇಬಿಸ್ ಅಂಟಿದೆ. ಇಷ್ಟು ಹೇಳಿದ್ದೇ ತಡ, ರಾಜಕಾರಣಿ ಪೆನ್ನು ಹಾಳೆ ತೆಗೆದು ಬರೆಯಲು ಆರಂಭಿಸಿದ.

ಸಮಾಧಾನ. ಈಗಲೇ ಮೃತ್ಯು ಪತ್ರ ಬರೆಯುವದು ಬೇಡ. ನಿಮಗೇನೂ ಆಗುವದಿಲ್ಲ ಎಂದರು ವೈದ್ಯರು.

ನಾನು ಮೃತ್ಯುಪತ್ರ ಬರೆಯುತ್ತಿಲ್ಲ. ನನ್ನ ವಿರೋಧಿಗಳು ಯಾರು.. ನಾನು ಯಾರ್‍ಯಾರನ್ನು ಕಚ್ಚಬೇಕು.. ಎಂಬ ಯಾದಿ ತಯಾರಿಸುತ್ತಿದ್ದೇನೆ ಎಂದ ರಾಜ ಕಾರಣಿ.

★★★

ವಾರಾಂತ್ಯದ ದಿನ ಆತನಿಗೆ ಮೀನು ಹಿಡಿಯುವ ಹುಚ್ಚು. ಆ ದಿನದ ತುಂತುರು ಮಳೆ ಹಾಗೂ ತಣ್ಣನೆಯ ಗಾಳಿಯಿಂದಾಗಿ ಮೀನು ಹಿಡಿಯದೇ ಆತ ಮನೆಗೆ ಮರಳಿದ.

'ಬಟ್ಟೆ ಬದಲಾಯಿಸಿ, ಹೆಂಡತಿಯ ಪಕ್ಕದಲ್ಲಿ ಮಲಗುತ್ತ ಎಂಥ ಕೆಟ್ಟ ಹವೆ ಪ್ರಿಯೇ?' ಎಂದ.

'ಹೌದು, ಇಂಥ ಕೆಟ್ಟ ಹವೆಯಲ್ಲೂ ನನ್ನ ಮೂರ್ಖ ಗಂಡ ಮೀನು ಹಿಡಿಯಲು ಹೋಗಿದ್ದಾನೆ ನೋಡು' ಎಂದಳವಳು.

★★★

ವಿವಾಹ ವಿಚ್ಛೇದನೆಯಾದ ಅವಳನ್ನು ಅವಳ ಗೆಳತಿ ಹೀಗೆ ಕೇಳಿದಳು: ನೀನೇ ಅವನನ್ನು ಬಿಟ್ಟೆಯಾ?

ಇಲ್ಲ.

ಅವನೇ ನಿನ್ನನ್ನು ಬಿಟ್ಟನೇ?

ಇಲ್ಲ.

ಮತ್ತೆ?

'ಪ್ರೀತಿಯೇ ನಮ್ಮಿಬ್ಬರನ್ನು ಬಿಟ್ಟಿತು.'

★★★

ಒಬ್ಬ ಹುಡುಗಿ ಸೇತುವೆ ಮೇಲಿಂದ ಕೆಳಗೆ ಜಿಗಿಯಲು ಸಿದ್ಧಳಾಗಿದ್ದಳು. ಒಬ್ಬ ಯುವಕ ಅವಳನ್ನು ತಡೆದು, 'ಏನು ಮಾಡುತ್ತಿ' ಎಂದು ಕೇಳಿದ.

ಅವಳು 'ಆತ್ಮಹತ್ಯೆ' ಎಂದಳು. ಆತ 'ನೀನು ಜಿಗಿಯುವ ಮುನ್ನ ನನಗೊಂದು ಮುತ್ತು ಕೊಡು' ಎಂದ. ಆಕೆ ಆತನನ್ನು ಮುದ್ದಿಸಿದಳು.

ಅತ್ಯದ್ಭುತ! ಇಂಥ ಮುತ್ತನ್ನು ನಾನೆಂದೂ ಪಡೆದಿರಲಿಲ್ಲ ಎಂದು ಆತ ಉದ್ಗರಿಸಿದ.

ಆಮೇಲೆ ನೀನೇಕೆ ಸಾಯುತ್ತಿರುವೆ? ಎಂದು ಕೇಳಿದ. ನಾನು ಹೀಗೆ ಹುಡುಗಿಯರ ಹಾಗೆ ಬಟ್ಟೆ ತೊಟ್ಟುಕೊಳ್ಳುವುದು ನನ್ನ ತಂದೆ ತಾಯಿಯರಿಗೆ ಸೇರುವುದಿಲ್ಲ. ಅದಕ್ಕೆ... ಮಾತು ಮುಗಿಯುವ ಮುನ್ನ ಮುತ್ತು ಪಡೆದ ಹುಡುಗ ಸೇತುವೆ ಮೇಲಿಂದ ಕೆಳಗೆ ಹಾರಿದ್ದ.




ಸಂಗ್ರಹ: ಸುಭಾಸ ಯಾದವಾಡ

**ಕಿತ್ತು ಬಿಡು**

ಆಗತಾನೇ ಮಾರ್ಕೆಟ್‌ನಿಂದ ಬಂದ ಮನೆಯೊಡತಿ ಮನೆಯಾಳು ಶಿಂಗನನ್ನು ಕಂಡು ಗುಡುಗಿದಳು:

'ನನ್ನ ಸೀರೆ ಕಿತ್ತು ಬಿಡು'

'ಕಿತ್ತುಬಿಟ್ಟೆ'

'ರವಿಕೆ ಬಿಚ್ಚು'

'ಅದನ್ನೂ ಬಿಚ್ಚಿದೆ'

'ಈಗ ಲಂಗವನ್ನು ತೆಗೆ'

'ಹಾಗೆಯೇ ಆಗಲಿ'

'ಇನ್ನೊಮ್ಮೆ ನೀನು ಈ ರೀತಿ ನನ್ನ ಉಡುಪುಗಳನ್ನು ಧರಿಸಿಕೊಳ್ಳುವುದನ್ನು ಕಂಡರೆ ನಿನ್ನನ್ನು ಮನೆ ಕೆಲಸದಿಂದ ತೆಗೆದು ಹಾಕುತ್ತೇವೆ.'




★★★

**ಪರಿಹಾರ**

ಆಕೆ: ನನ್ನ ತೊಂದರೆಗಳು ಅರ್ಧಕರ್ಧ ಕಡಿಮೆ ಯಾದವು.

ಈಕೆ: ಏನೇ? ಅಂಥಾದ್ದೇನು ಚಮತ್ಕಾರ ನಡೆಯಿತು?

ಆಕೆ: ನಾನು ನನ್ನ ಪತಿಗೆ ಡೈವೋರ್ಸ್ ನೀಡಿದೆ.

★★★




**ಮುಂದಿನ ಸಲ ಬನ್ನಿ**

'ಕ್ಷಮಿಸಿ, ನಿನ್ನೆ ನಿಮ್ಮ ವಿವಾಹ ಸಮಾರಂಭಕ್ಕೆ ಬರಲಾಗಲಿಲ್ಲ.' ಚಿತ್ರ ನಿರ್ದೇಶಕ ನಟಿಯ ಕ್ಷಮೆ ಕೋರಿದ.

'ಪರ್‍ವಾಗಿಲ್ಲ, ಮುಂದಿನ ಸಾರಿ ಖಂಡಿತ ಬನ್ನಿ' ಹೂ ನಗೆ ಸೂಸುತ್ತಾ ಅಂದಳು ನಟಿ.

★★★




**ಮುಗಿದಿದೆ**

'ನಿಮ್ಮ ಚಂದಾ ಹಣ ಮುಗಿದಿದೆ' ಎಂದು ಪತ್ರಿಕಾ ಸಂಪಾದಕರಿಂದ ಶಿಂಗನ ಹೆಸರಿಗೊಂದು ಪತ್ರ ಬಂತು. ಅದನ್ನು ಒಡೆದು ಓದಿದ ಶಿಂಗ.

'ಸದ್ಯ ನಿಮ್ಮ ಪತ್ರಿಕೆಯನ್ನು ಓದುವ ತೊಂದರೆಯೂ ಮುಗಿಯಿತು' ಎಂದು ಉತ್ತರಿಸಿದ!

-ಸೋಮನಾಥ ಎಸ್. ಕರ್ಕೇರ